## ಪ್ರಥಮ ದರ್ಜೆ ನ್ಯಾಯಿಕಧಿಕಾರಿಗಳ ನ್ಯಾಯಾಲಯ, ಗೌರಿಬಿದನೂರು

## ಸಿಸಿ ಸಂಖ್ಯೆ:549/2021

| | |
|---|---|
| ಫ್ರಾಸಾ | 02 |
| ಚಾಸಾ | 02 |

ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ **30-11-2022**

ಸಾಕ್ಷಿಯ ಹೆಸರು : ಜಗನ್ನಾಥರೆಡ್ಡಿ
ತಂದೆಯ ಹೆಸರು : ಚಿನ್ನಪ್ಪಯ್ಯ
ವಯಸ್ಸು : 71 ವರ್ಷ
ಉದ್ಯೋಗ : ಚಾಲಕ
ವಾಸಸ್ಥಳ : ನಾಗೇನಹಳ್ಳಿ

**ಮುಖ್ಯ ವಿಚಾರಣೆ : ಎಪಿಪಿರವರಿಂದಃ**

1 ನೇ ಆರೋಪಿ ನನ್ನ ಅಳಿಯ. 2 ಮತ್ತು 3 ನೇ ಆರೋಪಿತರು ನನ್ನ ಬೀಗರು. ಫ್ರಾಸಾ-1 ನನ್ನ ಮಗಳನ್ನು 2 ಮತ್ತು 3 ನೇ ಆರೋಪಿತರ ಮಗನಾದ 1 ನೇ ಆರೋಪಿಗೆ ಕೊಟ್ಟು ದಿನಾಂಕ 07.06.2013 ರಂದು ಧರ್ಮಸ್ಥಳದಲ್ಲಿ ಮದುವೆ ಮಾಡಿದ್ದೇವೆ. ಶಂಕರರೆಡ್ಡಿ ಯವರು ಹಿಂಸೆಯಿಂದ ನಮ್ಮ ಬಳಿ ಹಣವಿಲ್ಲವೆಂದರು ಸಹ ಅವರೇ ಮಿನಿ ಬಸ್ಸನ್ನು ಮಾಡಿ ನನ್ನ ಮಗಳನ್ನು ಮದುವೆ ಮಾಡಿಕೊಂಡರು. ಮದುವೆಯ ಖರ್ಚನ್ನು ಶಂಕರರೆಡ್ಡಿ ರವರೇ ಭರಿಸಿದ್ದರು.

ಮದುವೆಯ ನಂತರ ಸುಮಾರು 2 - 3 ವರ್ಷಗಳ ಕಾಲ ನನ್ನ ಮಗಳು, ಅಳಿಯ ಅನ್ಯೋನ್ಯವಾಗಿದ್ದರು. ನಂತರದ ದಿನಗಳಲ್ಲಿ ನನ್ನ ಅಳಿಯ 1 ನೇ

ಆರೋಪಿಯು ವರದಕ್ಷಿಣೆ ಹಣಕ್ಕೆ ಬೇಡಿಕೆ ಇಟ್ಟಿದ್ದು, ನಂತರ ಸುಮಾರು ಐದು ಲಕ್ಷದವರೆವಿಗೂ 1 ನೇ ಆರೋಪಿಗೆ ನೀಡಿದ್ದೆ. ಪುನಃ ಆರೋಪಿಯು ನನ್ನ ಮಗಳಿಗೆ ಹಿಂಸೆ ನೀಡಿದ್ದರು. ನನ್ನ ಮಗಳು ಹಣ ತರಲು ಒಪ್ಪದಿದ್ದಾಗ ವಿಷ ಕುಡಿದ್ದಿದ್ದಾಳೆ ಎಂದು ಆರೋಪಿಸಿ ಗೌರಿಬಿದನೂರಿನ ಮಾನಸ ಆಸ್ಪತ್ರೆಗೆ ದಾಖಲು ಮಾಡಿದ್ದರು. ದಿನಾಂಕ ನೆನಪಿಲ್ಲ, ಘಟನೆ ನಡೆದು ಸುಮಾರು ಮೂರು ವರ್ಷವಾಗಿತ್ತು. ಆಸ್ಪತ್ರೆಯವರು ಹೆಚ್ಚಿನ ಚಿಕಿತ್ಸೆಗಾಗಿ ದೇವನಹಳ್ಳಿಯಲ್ಲಿರುವ ಮಾನಸ ಆಸ್ಪತ್ರೆಗೆ ದಾಖಲು ಮಾಡಲು ತಿಳಿಸಿದರು. ನಂತರ ನನ್ನ ಮಗಳನ್ನು ದೇವನಹಳ್ಳಿಯಲ್ಲಿರುವ ಮಾನಸ ಆಸ್ಪತ್ರೆಗೆ ದಾಖಲು ಮಾಡಿದೆ. ಅಲ್ಲಿ ಸುಮಾರು 15 ದಿನಗಳ ಕಾಲ ಹೊಳರೋಗಿಯಾಗಿ ನನ್ನ ಮಗಳು ಚಿಕಿತ್ಸೆ ಪಡೆದಳು. ಅಲ್ಲಿ ಸುಮಾರು ಒಂದೂವರೆ ಲಕ್ಷ ಹಣ ಖರ್ಚಾಗಿತ್ತು. ನನ್ನ ಮಗಳು ಚೇತರಿಸಿಕೊಂಡ ನಂತರ ಆರೋಪಿತರೇ ನನಗೆ ವಿಷ ಕುಡಿಸಿದ್ದರು ಎಂದು ತಿಳಿಸಿದಳು. ನಂತರ ಅವಳನ್ನು ನಾಗೇನಹಳ್ಳಿಗೆ ಕರೆದುಕೊಂಡು ಬಂದೆವು. ನಂತರ ನನ್ನ ಅಳಿಯನನ್ನು ಕರೆಯಿಸಿ ಊರಿನಲ್ಲಿ ಪಂಚಾಯಿತಿ ಮಾಡಿದೆವು. ಆರೋಪಿ ಪಂಚಾಯಿತಿ ತೀರ್ಮಾನಕ್ಕೆ ಒಪ್ಪಲಿಲ್ಲ. ಬದಲಾಗಿ ನಮಗೆ ಹಲ್ಲೆ ಮಾಡಲು ಮುಂದಾಗಿದ್ದರು. ನಂತರ ದಿನಾಂಕ 08.10.2019 ರಂದು ಗೌರಿಬಿದನೂರಿನ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಆರೋಪಿತರ ವಿರುದ್ಧ ದೂರು ದಾಖಲಿಸಿದ್ದೆವು.

ನಂತರ ಪೊಲೀಸರು ಅದೇ ದಿನ ಚಿಕ್ಕಕುರುಗೋಡಿಗೆ ಬಂದು ಮಹಜರ್ ಕ್ರಮ ಜರುಗಿಸಿದರು . ಸಾಕ್ಷಿಗೆ ಈ ಹಂತದಲ್ಲಿ ನಿಪಿ 2 ನ್ನು ತೋರಿಸಲಾಗಿ, ಸಾಕ್ಷಿಯು

ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ, ಸಾಕ್ಷಿಯ ಸಹಿಯನ್ನು **ನಿಪಿ 2(ಬಿ)** ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರೆದು ಸಂಜೆ 04.30 ರಿಂದ 05.30 ರವರೆವಿಗೆ ಪೊಲೀಸರು ಪಂಚನಾಮೆ ಕ್ರಮ ಜರುಗಿಸಿದರು ಎಂದು ನುಡಿಯುತ್ತಾರೆ. ಘಟನೆಯ ಬಗ್ಗೆ ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ.

**(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಎಪಿಪಿಯವರು ಅನುಮತಿಯನ್ನು ಕೋರಿದ್ದು ನೀಡಲಾಯಿತು**).

**ಪಾಟೀ ಸವಾಲುಃ ಎಪಿಪಿ ರವರಿಂದಃ**

ನನ್ನ ಮಗಳು ದಿನಾಂಕ 28.10.2019 ರಂದು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು ಎಂದರೆ ಸರಿ. ದಿನಾಂಕ 28.10.2019 ರಂದೇ ಪೊಲೀಸರು ನಿಪಿ 2 ರಂತೆ ಸ್ಥಳ ಪಂಚನಾಮೆ ಜರುಗಿಸಿದರು ಎಂದರೆ ಸರಿ. ದಿನಾಂಕ 13.10.2019 ರಂದು ನನ್ನ ಮಗಳಿಗೆ ಆರೋಪಿತರು ವಿಷ ಕುಡಿಸಿದ್ದರು ಎಂದರೆ ಸರಿ.

**ಪಾಟೀಸವಾಲು : ಆರೋಪಿತರ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗೆ ಸಮಯಾವಕಾಶ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇದೆ**

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗೌರಿಬಿದನೂರು